## 'ಕನಸಿನ ರಾಣಿ'ಯ ಹೊಸ ಕನಸುಗಳು



ಮಾಲಾಶ್ರೀ ಗಾಂಧಿನಗರದಲ್ಲಿ ಮತ್ತೆ ಕಾಣಿಸಿಕೊಂಡಿದ್ದಾರೆ. ಪೊಲೀಸ್ ಸಮವಸ್ತ್ರ ಮಡಿಚಿಟ್ಟಿರುವ ಅವರು ಸೀರೆಯಲ್ಲಿ ಕಂಗೊಳಿಸುತ್ತಿರುವುದು ಈ ಸಿನಿಮಾ ಋತುವಿನ ವಿಶೇಷ. ಬಟ್ಟೆ ಬದಲಿಸುವ ಮೂಲಕ ಮಾಲಾಶ್ರೀ ಬದಲಾಗಿದ್ದಾರೆ ಎನ್ನುವಂತಿಲ್ಲ; ಬದಲಾಗಿರುವುದು ಅವರ ಪತಿ ರಾಮು. ಸಾಹಸ ಪ್ರಧಾನ ಚಿತ್ರಗಳು ಗಿಟ್ಟದೆ ಹೋಗಿರುವುದರಿಂದ ಭಾವನಾ ಪ್ರಧಾನ ಸಿನಿಮಾಗಳತ್ತ ರಾಮು ಹೊರಳಿದ್ದಾರೆ. ಅವರು ನಿರ್ಮಿಸುತ್ತಿರುವ ಹೊಸ ಚಿತ್ರದ ಹೆಸರು 'ಗಂಗಾ'.

'ಗಂಗಾ' ಚಿತ್ರದ ಮತ್ತೊಂದು ವಿಶೇಷ ಆ ಚಿತ್ರದ ನಿರ್ದೇಶಕ ಸಾಯಿಪ್ರಕಾಶ್. ಚಿತ್ರದ ನಾಯಕ–ನಾಯಕಿ ಎಲ್ಲವೂ ಮಾಲಾಶ್ರೀ ಅವರೇ ಆಗಿದ್ದ ದಿನಗಳಲ್ಲಿ, 'ಕನಸಿನ ರಾಣಿ'ಯ ಅನೇಕ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ್ದವರು ಇದೇ ಸಾಯಿಪ್ರಕಾಶ್. ಮಾಲಾಶ್ರೀ ಸಾಹಸಪ್ರಧಾನ ಚಿತ್ರಗಳತ್ತ ಹೊರಳಿಕೊಂಡ ಮೇಲೆ ಸಾಯಿಪ್ರಕಾಶ್ ಅವರ ಪಥವೂ ಬದಲಾಯಿತು. ಹತ್ತೊಂಬತ್ತು ವರ್ಷಗಳ ದೀರ್ಘ ಅಂತರದ ನಂತರ ಈ ಜೋಡಿ 'ಗಂಗಾ' ಜಪದ ನೆಪದಲ್ಲಿ ಮತ್ತೆ ಒಂದಾಗಿದೆ.

'ಗಂಗಾ' ಸ್ತ್ರೀಕೇಂದ್ರಿತ ಕಥನ. ಪ್ರೇಮ ಹಾಗೂ ಸಾಹಸ ಕಥೆಯ ಪ್ರಮುಖ ಭಾಗಗಳಂತೆ. ಮಾಲಾಶ್ರೀ ಅವರ ಕೌಟುಂಬಿಕ ಮತ್ತು ದುರ್ಗಿ ಇಮೇಜ್‌ಗಳೆರಡನ್ನೂ ಒಂದೇ ಸಿನಿಮಾದಲ್ಲಿ ಮೂಡಿಸುವ ಪ್ರಯತ್ನ ನಿರ್ದೇಶಕರದು. ರಂಗಾಯಣ ರಘು, ಶ್ರೀನಿವಾಸಮೂರ್ತಿ. ಪವಿತ್ರಾ ಲೋಕೇಶ್ ತಾರಾಗಣದಲ್ಲಿರುವ ಪ್ರಮುಖರು.

ಒಂದೆಡೆ 'ಗಂಗಾ' ಸಿನಿಮಾ ಸೆಟ್ಟೇರಿದ್ದರೆ, ಮತ್ತೊಂದೆಡೆ ಮಾಲಾಶ್ರೀ ಅಭಿನಯದ ಮತ್ತೊಂದು ಸಿನಿಮಾ 'ಮಹಾಕಾಳಿ' ಇನ್ನೇನು ಚಿತ್ರೀಕರಣ ಮುಗಿಸುವ ಹಂತದಲ್ಲಿದೆ. ಮಹೇಂದರ್ ನಿರ್ದೇಶನದ ಈ ಚಿತ್ರದಲ್ಲಿ ಸುಂದರ ಪ್ರೇಮಕಥೆಯ ಹಂದರ ಇದೆಯಂತೆ. ಹೊಸ ಪ್ರತಿಭೆಗಳೇ ಹೆಚ್ಚಾಗಿರುವ 'ಮಹಾಕಾಳಿ' ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ಮಾಲಾಶ್ರೀ ಕೆಲವು ವಿಚಿತ್ರ ಅನುಭವಗಳನ್ನು ಅನುಭವಿಸಿದರಂತೆ. ಚಿತ್ರದ ಶೀರ್ಷಿಕೆಯಲ್ಲಿನ ಕಾಳಿಗೂ ಈ ಅನುಭವಗಳಿಗೂ ಸಂಬಂಧ ಇರಬೇಕು ಎನ್ನುವುದು ಅವರ ಅನಿಸಿಕೆ.

## ಹಾರುಗುದುರೆಯನೇರಿ ಕಿಟ್ಟಿ!



ಶ್ರೀನಗರ ಕಿಟ್ಟಿ ಅವರ ವೃತ್ತಿಬದುಕಿನಲ್ಲೀಗ ಸಾಲು ಸಾಲು ಚಿತ್ರಗಳ ಬಿಡುಗಡೆಯ ಕಾಲ. 'ಸವಾರಿ 2' ಚಿತ್ರ ಎರಡು ವಾರಗಳ ಹಿಂದೆಯಷ್ಟೇ ತೆರೆ ಕಂಡಿದೆ. ಈಗ 'ಪಾರು ವೈಫ್ ಆಫ್ ದೇವದಾಸ್' ತೆರೆ ಕಾಣಲು ಸಿದ್ಧತೆ ನಡೆಸಿದೆ. ಕಿರಣ್ ಗೋವಿ ನಿರ್ದೇಶನದ ಈ ಸಿನಿಮಾ ಚಿತ್ರಮಂದಿರಗಳ ಸಮಸ್ಯೆ ಬಗೆಹರಿದಲ್ಲಿ ಜೂನ್ ತಿಂಗಳಲ್ಲಿಯೇ ಪ್ರೇಕ್ಷಕರಿಗೆ ಮುಖಾಮುಖಿಯಾಗಲಿದೆ.

'ಪಾರು ವೈಫ್ ಆಫ್ ದೇವದಾಸ್' ಪ್ರೀತಿಯ ನಶೆಯ ಚಿತ್ರ ಎನ್ನುವುದು ನಿರ್ದೇಶಕರ ಬಣ್ಣನೆ. ಈ ಚಿತ್ರದಲ್ಲಿ ಕಿಟ್ಟಿಗೆ ಜೋಡಿಯಾಗಿ ಜಯಮಾಲಾ ಅವರ ಪುತ್ರಿ ಸೌಂದರ್ಯ ಕಾಣಿಸಿಕೊಂಡಿದ್ದಾರೆ. ಇಬ್ಬರ ಜೋಡಿ ಮುದ್ದಾಗಿದ್ದು, ಪ್ರೇಕ್ಷಕರ ಮನಸ್ಸು ಗೆಲ್ಲಲಿದೆ ಎನ್ನುವುದು ಚಿತ್ರತಂಡದ ನಂಬಿಕೆ.

ಪಾರುವಿನಿಂದ ನಶೆಯಿಂದ ಮುಂದೆ ಬಂದರೆ ಕಿಟ್ಟಿ ಅವರ 'ಬಹುಪರಾಕ್' ಕೂಡ ತೆರೆಕಾಣಲು ಸಿದ್ಧತೆ ನಡೆಸಿದೆ. 'ಸಿಂಪಲ್ಲಾಗೊಂದ್ ಲವ್ ಸ್ಟೋರಿ' ಚಿತ್ರದ ಸುನಿ ನಿರ್ದೇಶಿಸಿರುವ ಈ ಚಿತ್ರದಲ್ಲಿ ಕಿಟ್ಟಿ ಅವರದು ಪ್ರೇಕ್ಷಕರಿಂದ ಬಹುಪರಾಕ್ ಎನ್ನಿಸಿಕೊಳ್ಳುವ ಗತ್ತಿನ ಪಾತ್ರವಂತೆ. 'ಬಹುಪರಾಕ್'ನಲ್ಲಿ ಕಿಟ್ಟಿಗೆ ಮೂವರು ನಾಯಕಿಯರು– ಮೇಘನಾ ರಾಜ್, ಭಾವನಾ ರಾವ್ ಹಾಗೂ ಮಾನಸ ಜೋಶಿ. ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಕಳೆದ ವಾರವಷ್ಟೇ ಪೇಟೆಗೆ ಬಂದಿದೆ.

★ ರಘು